# ಗರ್ಭಕೋಶ ನಿವಾರಣೆ

## ಬಗೆಬಗೆಯ ತಪ್ಪು ಕಲ್ಪನೆಗಳು (HYSTERECTOMY)



ಗರ್ಭಕೋಶ ಸಂತಾನೋತ್ಪತ್ತಿಯ ಪ್ರಮುಖ ಅಂಗ. ಪ್ರತಿಯೊಬ್ಬ ಹೆಣ್ಣಿಗೂ ಪ್ರತಿ ತಿಂಗಳು ಋತುಸ್ರಾವವಾಗಲು ಈ ಗರ್ಭಕೋಶವೇ ನೆರವಾಗುತ್ತದೆ. ಇಂತಹ ಮಹತ್ವದ ಕೆಲಸಕ್ಕೆ ನೆರವಾಗುವ ಗರ್ಭಕೋಶ ಒಮ್ಮೊಮ್ಮೆ ಯಾವ ಯಾವುದೋ ಕಾರಣಗಳಿಂದ ರೋಗಗ್ರಸ್ತವಾಗ ತನ್ನ ನಿಯಮಿತ ಕೆಲಸ-ಕಾರ್ಯ ಮಾಡಲು ಅಸಮರ್ಥವಾಗುತ್ತದೆ. ಅಂತಹ ಸ್ಥಿತಿಯಲ್ಲಿ ಅದನ್ನು ತೆಗೆಯುವುದೇ ದಾರಿ. ತಡೆದುಕೊಳ್ಳಲು ಆಗದಂತಹ ಅಸಾಧ್ಯ ನೋವಿನ ಸಂದರ್ಭದಲ್ಲಿ ಅದನ್ನು ತೆಗೆಯಿಸಿ ಹಾಕುವುದರಲ್ಲಿ ಯಾವುದೇ ತಪ್ಪಿಲ್ಲ. ಆಗ ಜೀವಿತಾವಧಿಯ ಗುಣಮಟ್ಟವೂ ಉತ್ತಮಗೊಳ್ಳುತ್ತದೆ. ಆದರೆ ಕೆಲವರು ಗರ್ಭಕೋಶ ತೆಗೆಸಿಕೊಂಡರೆ ನನಗೆ ಆ ಸಮಸ್ಯೆ ಆಗಬಹುದು, ಈ ಸಮಸ್ಯೆ ಆಗಬಹುದು ಎಂಬ ತಪ್ಪು ಕಲ್ಪನೆ ಹೊಂದಿರುತ್ತಾರೆ.

### ಏನೇನು ತಪ್ಪು ಕಲ್ಪನೆಗಳು?

**1. ಗರ್ಭಕೋಶ ತೆಗೆಯಿಸಿದರೆ ಶಕ್ತಿ ಹೊರಟು ಹೋಗುತ್ತದೆ, ಜೀವನಾಸಕ್ತಿ ಇರುವುದಿಲ್ಲ.**

☑ ಹಾಗೇನೂ ಇಲ್ಲ. 50ನೇ ವಯಸ್ಸಿನ ಆಸುಪಾಸಿನಲ್ಲಿ ಮಹಿಳೆಯರಿಗೆ ಮುಟ್ಟು ನಿಲ್ಲುತ್ತದೆ. ಆಗ ಅಂಡಾಶಯದಿಂದ ಬಿಡುಗಡೆಯಾಗುವ ಈಸ್ಟ್ರೋಜೆನ್ ಹಾಗಗೂ ಪ್ರೊಜೆಸ್ಟ್ರಾನ್ ಹಾರ್ಮೋನುಗಳ ಪ್ರಮಾಣ ಕಡಿಮೆಯಾಗುತ್ತದೆ. 35-40ರ ಆಸುಪಾಸಿನ ಮಹಿಳೆಯರ ಗರ್ಭಕೋಶ ತೆಗೆಯಿಸಬೇಕಾದ ಅನಿವಾರ್ಯ ಸ್ಥಿತಿ ಬಂದಾಗ ಅದರ ಜತೆಗೆ ಅಂಡಕೋಶವನ್ನು ತೆಗೆಯಲಾಗುವುದಿಲ್ಲ. ಹೀಗಾಗಿ ಅದು ಹಾರ್ಮೋನು ಬಿಡುಗಡೆ ಕೆಲಸವನ್ನು ಚಾಚು ತಪ್ಪದೇ ಮಾಡುತ್ತಿರುತ್ತದೆ. ಆ ಕಾರಣದಿಂದ ಶಕ್ತಿ ಕಡಿಮೆಯಾಗುವ, ಜೀವನೋತ್ಸಾಹ ಕುಗ್ಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮೊದಲಿನ ಕ್ರಿಯಾಶೀಲತೆ ಹಾಗೆಯೇ ಉಳಿದಿರುತ್ತದೆ.

**2. ಮೂಳೆಗಳು ದುರ್ಬಲಗೊಳ್ಳುತ್ತವೆ. ನೋವಿನಿಂದ ಕೂಡಿರುತ್ತದೆ.**

☑ ಅಂಡಾಶಯದಿಂದ ಬಿಡುಗಡೆಯಾಗುವ ಹಾರ್ಮೋನುಗಳು 50ನೇ ವಯಸ್ಸಿನ ತನಕವೂ ಮಹಿಳೆಯರನ್ನು ಹಾಗೆಯೇ ಕ್ರಿಯಾಶೀಲರಾಗಿ ಇಟ್ಟಿರುತ್ತವೆ. ಗರ್ಭಕೋಶ ನಿವಾರಣೆ ಮಾಡುವ ಸಂದರ್ಭದಲ್ಲಿ ಅವರ ಅಂಡಾಶಯವನ್ನು ತೆಗೆಯದೇ ಹಾಗೆಯೇ ರಕ್ಷಿಸಲ್ಪಡುವುದರಿಂದ ಅವರ ಮೂಳೆಗಳು ದುರ್ಬಲಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**3. ಲೈಂಗಿಕ ಆಸಕ್ತಿ ಕುಗ್ಗುತ್ತದೆ.**

☑ ಗರ್ಭಕೋಶವನ್ನಷ್ಟೇ ತೆಗೆಸಿ ಹಾಕುವುದರಿಂದ ಲೈಂಗಿಕ ಕ್ರಿಯಾಶೀಲತೆ ಕಡಿಮೆಯಾಗುವುದಿಲ್ಲ. ಗರ್ಭಕೋಶದ ಕೆಳ ಭಾಗದಲ್ಲಿರುವ ವೆಜೈನಾದಲ್ಲಿ ಈಸ್ಟ್ರೋಜೆನ್ ಹಾಗೂ ಪ್ರೊಜೆಸ್ಟ್ರಾನ್ ಹಾರ್ಮೋನು ಮೊದಲಿನ ಹಾಗೆಯೇ ಕೆಲಸ ಮಾಡುತ್ತಿರುತತ್ತದೆ. ಅದೇ ಸ್ನಿಗ್ಧತೆ ಉಳಿದಿರುತ್ತದೆ. ಹಾಗಾಗಿ ಲೈಂಗಿಕ ಚಟುವಟಿಕೆಗೆ ಯಾವುದೇ ಬಾಧೆ ಉಂಟಾಗುವುದಿಲ್ಲ.

**4. ತೂಕ ಹೆಚ್ಚಾಗುತ್ತದೆ, ದಪ್ಪಗಾಗುತ್ತಾರೆ.**

☑ ಗರ್ಭಕೋಶ ನಿವಾರಣೆಗೂ ದೇಹ ದಪ್ಪಗಾಗುವುದಕ್ಕೂ ಯಾವುದೇ ಸಂಬಂಧ ಇಲ್ಲ. 40-45ನೇ ವಯಸ್ಸಿನ ಬಳಿಕ ಬೇರೆ ಬೇರೆ ಕಾರಣಗಳಿಂದ ದೇಹ ದಪ್ಪಗಾಗುವುದು ಸಹಜ. ಆದರೆ ಗರ್ಭಕೋಶ ನಿವಾರಣೆ ಮಾಡಿದ ಬಳಿಕ ದೇಹತೂಕ ಹೆಚ್ಚುತ್ತದೆ ಎನ್ನುವುದು ತಪ್ಪು ಕಲ್ಪನೆ. ಕ್ರಿಯಾಶೀಲ ಜೀವನಶೈಲಿ, ಸೂಕ್ತ ಆಹಾರ, ದೈನಂದಿನ ವ್ಯಾಯಾಮ, ನಡಿಗೆ ಮುಂತಾದವುಗಳಿಂದ ದೇಹತೂಕ ಹೆಚ್ಚಾಗದಂತೆ ನೋಡಿಕೊಳ್ಳಬೇಕು.

**5. ಗರ್ಭಕೋಶ ತೆಗೆದು ಹಾಕಿದ ಬಳಿಕ ಒಂದರಿಂದ ಒಂದೂವರೆ ತಿಂಗಳು ಕಡ್ಡಾಯ ವಿಶ್ರಾಂತಿ ಮಾಡಬೇಕು.**

☑ ಇಂದಿನ ವೈದ್ಯಕೀಯ ತಂತ್ರಜ್ಞಾನ ಅದೆಷ್ಟು ವಿಕಾಸಗೊಂಡಿದೆಯೆಂದರೆ, ಕಡಿಮೆ ಸಮಯದಲ್ಲಿ, ಅತಿ ಸಣ್ಣ ರಂಧ್ರದ ಮೂಲಕ ಶಸ್ತ್ರಚಿಕಿತ್ಸೆ ಪ್ರಕ್ರಿಯೆ ನಡೆಸಲಾಗುವುದರಿಂದ ರಕ್ತಸ್ರಾವದ ಪ್ರಮಾಣವೂ ಕಡಿಮೆ ಹಾಗೂ ಬಹುಬೇಗ ಗಾಯ ಗುಣವಾಗುವುದರಿಂದ 3-4 ದಿನಗಳಲ್ಲೇ ದೈನಂದಿನ ಚಟುವಟಿಕೆಗಳಿಗೆ ಮರಳಬಹುದು. ವಾರದಲ್ಲಿಯೇ ಉದ್ಯೋಗಸ್ಥ ಮಹಿಳೆಯರು ತಮ್ಮ ನೌಕರಿಗೆ ಹಾಜರಾಗಬಹುದು. ಹಾಗಾಗಿ ತಿಂಗಳುಗಟ್ಟಲೇ ರಜೆ ತೆಗೆದುಕೊಂಡು ಮನೆಯಲ್ಲಿಯೇ ಇರಬೇಕಾಗುತ್ತದೆ ಎಂಬ ಭಾವನೆ ತಪ್ಪು.

**6. 2-3 ಸಿಸೇರಿಯನ್ ಬಳಿಕ ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲ.**

☑ ಆದರೆ, ನುರಿತ ಶಸ್ತಚಿಕಿತ್ಸಾ ತಜ್ಞರಿಗೆ ಅದು ಕೂಡ ಒಂದು ಮಾಮೂಲು ಶಸ್ತ್ರಚಿಕಿತ್ಸೆಯೇ ಹೌದು.

### ಗಮನಿಸಿ:

- ಗರ್ಭಕೋಶ ನಿವಾರಣೆ ಮಾಡಿಕೊಂಡ ಒಂದು ತಿಂಗಳ ತನಕ ಲೈಂಗಿಕ ಚುಟುವಟಿಕೆಯಲ್‌ಲಿ ತೊಡಗಬಾರದು.
- ಗರ್ಭಕೋಶ ನಿವಾರಣೆಯ ಪ್ರಕ್ರಿಯೆಯಲ್ಲಿ ಕೇವಲ ಗರ್ಭಕೋಶವನ್ನಷ್ಟೇ ತೆಗೆಯಲಾಗುತ್ತದೆ. ಅಂಡಕೋಶವನ್ನು ಹಾಗೆಯೇ ಉಳಿಸಲಾಗುತ್ತದೆ. ಹೀಗಾಗಿ ಹಾರ್ಮೋನು ಬಿಡುಗಡೆ ಪ್ರಕ್ರಿಯೆ ನಿರಾತಂಕವಾಗಿ ನಡೆಯುತ್ತಲೇ ಇರುತ್ತದೆ.



## Dr. B. Ramesh

Medical Director, Gynaecology & Laparoscopic Surgery


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ALTIUS HOSPITAL Pvt.Ltd.**

ಹೈಟೆಕ್ ಲ್ಯಾಪ್ರೊಸ್ಕೋಪಿ & ಗೈನೊಕಾಲಜಿ ಹಾಸ್ಪಿಟಲ್

altiushospital@yahoo.com

No 511, Outer Ring Road, 4th Block, HBR Layout, Bangalore - 560043, Ph : 8882799799

www.altiushospital.com